**ಓ.ಎಸ್. 73/2023, ಪಿ.ಡಬ್ಲೂ-1 ಹೆಸರುಃ ಸಿ.ಜೆ. ರೇಷ್ಮ**

**ದಿಃ11-02-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ವಾದಿಯ ಪರ ಶ್ರೀ ಜಿ.ಬಿ.ಎಸ್. ವಕೀಲರಿಂದಃ**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ. ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ.

ದಿನಾಂಕ 19.01.2021 ರ ನೋಂದಣಿ ಕ್ರಯಪತ್ರದ ಗಣಕೀಕೃತ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ.1 ಎಂದು ಗುರುತಿಸಲಾಯಿತು. ದಿನಾಂಕ 18.10.2022 ರ ನೋಂದಣಿ ವಿಭಾಗ ಪತ್ರದ ಗಣಕೀಕೃತ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ.2 ಎಂದು ಗುರುತಿಸಲಾಯಿತು. ನನ್ನ ಅಜ್ಜಿಯಾದ ಪುಟ್ಟಮ್ಮ ರವರಿಗೆ ಸಂಬಂಧಿಸಿದ ಮರಣ ಪ್ರಮಾಣ ಪತ್ರದ ಗಣಕೀಕೃತ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ.3 ಎಂದು ಗುರುತಿಸಲಾಯಿತು. ದಾವಾ ಸ್ವತ್ತುಗಳಿಗೆ ಸಂಬಂಧಿಸಿದ 5 ಪಹಣಿಗಳನ್ನು ಹಾಜರುಪಡಿಸಿದ್ದು ನಿಪಿ.4 ರಿಂದ 8 ಎಂದು ಗುರುತಿಸಲಾಯಿತು. ಗೊಪ್ಪೇನಹಳ್ಳೀ ಗ್ರಾಮದ ಎಂ.ಆರ್.ಹೆಚ್.7/2022-23 ರ ಗಣಕೀಕೃತ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ.9 ಎಂದು ಗುರುತಿಸಲಾಯಿತು. ಕಂಜಿಗನಾಳು ಗ್ರಾಮದ ಎಂ.ಆರ್.ಟಿ.169/2022-23 ರ ಗಣಕೀಕೃತ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ.10 ಎಂದು ಗುರುತಿಸಲಾಯಿತು. ರಾಮಗಿರಿ ಗ್ರಾಮದ ಎಂ.ಆರ್.ಹೆಚ್.28/2020-21 ರ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ.11 ಎಂದು ಗುರುತಿಸಲಾಯಿತು. ಗೊಪ್ಪೇನಹಳ್ಳಿ ಗ್ರಾಮದ ಎಂ.ಆರ್.ಹೆಚ್.7/2022-23 ರ ಮತ್ತು ಎಂ.ಆರ್. 21/2011-12 ರ ದೃಡೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ನಿಪಿ.12 ಮತ್ತು 13 ಎಂದು ಗುರುತಿಸಲಾಯಿತು. ದಾವಾ ಅನುಸೂಚಿತ 7 ನೇ ಖಂಡಿಕೆಯ ಸ್ವತ್ತಿಗೆ ಸಂಬಂಧಸಿದ ಆಸ್ತಿ ತೆರಿಗೆ ಬೇಡಿಕೆಯ ದೃದೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ.14 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ